# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** : 112
**ಸದಸ್ಯರ ಹೆಸರು** : ಶ್ರೀ ನಾಗರಾಜು ಎಂ (ವಿಧಾನ ಸಭೆಯಿಂದ ಚುನಾಯಿತರಾದವರು)
**ಉತ್ತರಿಸುವವರು** : ಮಾನ್ಯ ಮುಖ್ಯಮಂತ್ರಿಯವರು.
**ಉತ್ತರಿಸಬೇಕಾದ ದಿನಾಂಕ** : 17.08.2026.

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಮಹಿಳೆಯರ ಮೇಲಿನ ಹಿಂಸಾಚಾರ ಪ್ರಕರಣಗಳ ಸಂಖ್ಯೆ ಎಷ್ಟು; ದೋಷಾರೋಪಣ ಪ್ರಮಾಣ (Conviction Rate) ಎಷ್ಟು; One Stop Centers ಪ್ರತಿ ಜಿಲ್ಲೆಯಲ್ಲಿ ಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸುತ್ತಿವೆಯೇ; ಈ ಕೇಂದ್ರಗಳಲ್ಲಿ ಸಿಬ್ಬಂದಿ ಕೊರತೆ ಇದೆಯೇ; ಇದ್ದಲ್ಲಿ, ಎಷ್ಟು ಕೊರತೆ ಇದೆ;</td><td>ರಾಜ್ಯದಲ್ಲಿ ಕಳೆದ 3 ವರ್ಷಗಳಲ್ಲಿ 2023 ರಿಂದ 2026 (ಜುಲೈ) ರವರೆಗೆ ಮಹಿಳೆಯರ ಮೇಲಿನ ಅಪರಾಧಗಳು/ಹಿಂಸಾಚಾರ ಕುರಿತಂತೆ ದಾಖಲಿಸಿರುವ ಪ್ರಕರಣಗಳ ಸಂಖ್ಯೆ ಈ ಕೆಳಕಂಡಂತೆ ಇರುತ್ತದೆ.<br>
<table>
<tr><th>ಕ್ರ. ಸಂ.</th><th>ಶೀರ್ಷಿಕೆ</th><th>2024</th><th>2025</th><th>2026(ಜುಲೈ)</th></tr>
<tr><td>1</td><td>ಅತ್ಯಾಚಾರ</td><td>621</td><td>552</td><td>348</td></tr>
<tr><td>2</td><td>ಲೈಂಗಿಕ ಕಿರುಕುಳ</td><td>6334</td><td>5854</td><td>3778</td></tr>
<tr><td>3</td><td>ವರದಕ್ಷಿಣೆ ಸಾವು</td><td>112</td><td>115</td><td>83</td></tr>
<tr><td>4</td><td>ಗಂಡನಿಂದ ಕಿರುಕುಳ</td><td>2903</td><td>2938</td><td>1878</td></tr>
<tr><td>5</td><td>ಡಿ.ಪಿ.ಕಾಯ್ದೆ</td><td>1990</td><td>1918</td><td>1176</td></tr>
</table>
ದೋಷಾರೋಪಣ ಪ್ರಮಾಣ ಮತ್ತು ಶಿಕ್ಷೆ ಪ್ರಮಾಣದ ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.<br><br>
• ರಾಜ್ಯದಲ್ಲಿ ಪ್ರಸ್ತುತ ಒಟ್ಟು 44 'ಒನ್ ಸ್ಟಾಪ್ ಸೆಂಟರ್'ಗಳು ಕಾರ್ಯನಿರ್ವಹಿಸುತ್ತಿವೆ. ಸದರಿ ಕೇಂದ್ರಗಳಲ್ಲಿ ಸರ್ಕಾರದ ಮಂಜೂರಾತಿ ಹುದ್ದೆಗಳಿಗೆ ಅನ್ವಯಿಸಿ 294 ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದಾರೆ.<br><br>
• ಈ ಕೇಂದ್ರಗಳಲ್ಲಿ ಪ್ರಸ್ತುತ 58 ಹುದ್ದೆಗಳು ಖಾಲಿಯಿದ್ದು, ಕಾಲ ಕಾಲಕ್ಕೆ ತೆರವಾಗುವ ಹುದ್ದೆಗಳನ್ನು ನಿಯಮಾನುಸಾರ ಭರ್ತಿ ಮಾಡಲಾಗುವುದು.</td></tr>
<tr><td>ಆ)</td><td>ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಮಹಿಳಾ ಆಶ್ರಯ ಗೃಹಗಳ ಮೇಲ್ವಿಚಾರಣೆ ಎಷ್ಟು ಬಾರಿ ನಡೆಸಲಾಗಿದೆ; ರಾಜ್ಯದ ಎಷ್ಟು ಜಿಲ್ಲೆಗಳಲ್ಲಿ Working Women's Hostelಗಳಿವೆ ಎಲ್ಲಾ ಹಾಸ್ಟೆಲ್‌ಗಳು ಕಾರ್ಯನಿರ್ವಹಣೆಯಲ್ಲಿವೆಯೇ;</td><td>ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ಮಹಿಳೆಯರಿಗಾಗಿ ಕಾರ್ಯನಿರ್ವಹಿಸುತ್ತಿರುವ ಆಶ್ರಯ ಗೃಹಗಳಾದ ರಾಜ್ಯ ಮಹಿಳಾ ನಿಲಯಗಳು ಮತ್ತು ಸ್ವೀಕಾರ ಕೇಂದ್ರಗಳು, ಶಕ್ತಿ ಸದನ, ರಾಜ್ಯ ಉದ್ಯೋಗಸ್ಥ ಮಹಿಳೆಯರ ವಸತಿ ನಿಲಯಗಳು ಮತ್ತು ಸಖಿ ನಿವಾಸ ಕೇಂದ್ರಗಳಿಗೆ ಸಂಬಂಧಪಟ್ಟ ಇಲಾಖಾ ಅಧಿಕಾರಿಗಳು ಸರಾಸರಿ ಮೂರು ತಿಂಗಳಿಗೊಮ್ಮೆ ಭೇಟಿ ನೀಡಿ ಮೇಲ್ವಿಚಾರಣೆ ನಡೆಸಿರುತ್ತಾರೆ.<br><br>
ರಾಜ್ಯ ಸರ್ಕಾರ ನಿರ್ವಹಿಸುತ್ತಿರುವ 23 ಉದ್ಯೋಗಸ್ಥ ಮಹಿಳೆಯರ ವಸತಿ ನಿಲಯಗಳು (Working Women's Hostel) ಗಳನ್ನು 6 ಜಿಲ್ಲೆಗಳಲ್ಲಿ ಹಾಗೂ ಕೇಂದ್ರ ಪುರಸ್ಕೃತ ಯೋಜನೆಯ ಒಟ್ಟು 67 ಸಖಿ ನಿವಾಸ್ ಉದ್ಯೋಗಸ್ಥ ಮಹಿಳೆಯರ ವಸತಿ ನಿಲಯಗಳು 21 ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿವೆ.</td></tr>
</table>

| | | |
|---|---|---|
| ಇ) | POCSO ಪ್ರಕರಣಗಳಲ್ಲಿ ತನಿಖೆ ಪೂರ್ಣಗೊಳ್ಳಲು ಸರಾಸರಿ ಎಷ್ಟು ಸಮಯ ತೆಗೆದುಕೊಳ್ಳುತ್ತಿದೆ; Child Care Institutions (CCI) ಮತ್ತು Juvenile Justice Boards (JJB) ಗಳಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು? | ಪೋಕ್ಸೋ ಕಾಯ್ದೆ ಪ್ರಕರಣಗಳಲ್ಲಿ ತನಿಖೆಯನ್ನು ನಿಯಮಾನುಸಾರ 60 ದಿನಗಳಲ್ಲಿ ಪೂರ್ಣಗೊಳಿಸುವಂತೆ ಈಗಾಗಲೇ ರಾಜ್ಯದ ಎಲ್ಲಾ ಘಟಕಾಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆಯನ್ನು ನೀಡಲಾಗಿರುತ್ತದೆ.<br><br>ಅದರಂತೆ POCSO ಕಾಯ್ದೆ ಪ್ರಕರಣಗಳಲ್ಲಿತನಿಖೆಯನ್ನು 60 ದಿನಗಳಲ್ಲಿ ಪೂರ್ಣಗೊಳಿಸಿ, ಆರೋಪಿಗಳ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಲಾಗುತ್ತಿದೆ.<br><br>ಮಕ್ಕಳ ರಕ್ಷಣಾ ನಿರ್ದೇಶನಾಲಯವು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಪ್ರತ್ಯೇಕಗೊಂಡು 2018 ರಿಂದ ಕಾರ್ಯನಿರ್ವಹಿಸುತ್ತಿದ್ದು, ಮಕ್ಕಳ ರಕ್ಷಣಾ ನಿರ್ದೇಶನಾಲಯದ ಅಧಿಕಾರಿ / ಸಿಬ್ಬಂದಿಗಳು ನಿಯೋಜನೆಯ ಮೇರೆಗೆ ಕಾರ್ಯನಿರ್ವಹಿಸುತ್ತಿದ್ದಾರೆ.<br><br>ಎಲ್ಲಾ ನೇಮಕಾತಿಗಳು ಹಾಗೂ ಮುಂಬಡ್ತಿಗಳು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ಒಳಪಟ್ಟಿರುತ್ತದೆ.<br><br>ರಾಜ್ಯದಲ್ಲಿ ಒಟ್ಟು 33 ಬಾಲನ್ಯಾಯ ಮಂಡಳಿಗಳು (JGB) ಕಾರ್ಯನಿರ್ವಹಿಸುತ್ತಿದ್ದು, ಎಲ್ಲಾ ಜಿಲ್ಲೆಗಳಲ್ಲೂ ಪೂರ್ಣ ಪ್ರಮಾಣದ ಹುದ್ದೆಗಳನ್ನು ಭರ್ತಿ ಮಾಡಲಾಗಿದೆ.<br>(ವಿಜಯಪುರ ಮತ್ತು ಬೆಂಗಳೂರು ನಗರ ಹೊರತುಪಡಿಸಿ)<br><br>ಪ್ರಸ್ತುತ 05 ಹುದ್ದೆಗಳು ಖಾಲಿ ಇದ್ದು, (ವಿಜಯನಗರ -1, ಬೆಂಗಳೂರು ನಗರ -04) ಬೆಂಗಳೂರು ನಗರ ಜಿಲ್ಲೆಯಲ್ಲಿ ಖಾಲಿ ಇರುವ 04 ಹುದ್ದೆಗಳನ್ನು ಭರ್ತಿಮಾಡಲು ಈಗಾಗಲೇ ಕ್ರಮವಹಿಸಲಾಗಿದ್ದು, ಸಂದರ್ಶನ ಬಾಕಿ ಇರುತ್ತದೆ. ತುರ್ತಾಗಿ ಖಾಲಿ ಹುದ್ದೆಗಳನ್ನು ಭರ್ತಿಮಾಡಲು ಕ್ರಮವಹಿಸಲಾಗುವುದು. |

**ಸಂಖ್ಯೆ: ಮಮಇ 175 ಮಮಅ 2026**

**(ಡಿ.ಕೆ. ಶಿವಕುಮಾರ್)**
ಮುಖ್ಯಮಂತ್ರಿ.

# ಅನುಬಂಧ

| ಕ್ರ.ಸಂ | ಶೀರ್ಷಿಕೆ | 2024 | | | | |
|---|---|---|---|---|---|---|
| | | ದಾಖಲಾದ ಪ್ರಕರಣ | ದೋಷಾರೋಪಣೆ ಸಲ್ಲಿಕೆ | ದೋಷಾರೋಪಣೆ ಸಲ್ಲಿಕೆಯ ಪ್ರಮಾಣ | ಶಿಕ್ಷೆ | ಶಿಕ್ಷೆಯ ಪ್ರಮಾಣ |
| 1 | ಅತ್ಯಾಚಾರ | 621 | 486 | 78.26 | 3 | 5.35 |
| 2 | ಲೈಂಗಿಕ ಕಿರುಕುಳ | 6334 | 5363 | 84.67 | 31 | 5.18 |
| 3 | ವರದಕ್ಷಿಣ ಸಾವು | 112 | 109 | 97.32 | 0 | 0 |
| 4 | ಗಂಡನಿಂದ ಕಿರುಕುಳ | 2903 | 2501 | 86.15 | 7 | 1.77 |
| 5 | ಡಿ.ಪಿ.ಕಾಯ್ದೆ | 1990 | 1332 | 66.93 | 4 | 1.99 |

| ಕ್ರ.ಸಂ | ಶೀರ್ಷಿಕೆ | 2025 | | | | |
|---|---|---|---|---|---|---|
| | | ದಾಖಲಾದ ಪ್ರಕರಣ | ದೋಷಾರೋಪಣೆ ಸಲ್ಲಿಕೆ | ದೋಷಾರೋಪಣೆ ಸಲ್ಲಿಕೆಯ ಪ್ರಮಾಣ | ಶಿಕ್ಷೆ | ಶಿಕ್ಷೆಯ ಪ್ರಮಾಣ |
| 1 | ಅತ್ಯಾಚಾರ | 552 | 430 | 77.90 | 1 | 5.88 |
| 2 | ಲೈಂಗಿಕ ಕಿರುಕುಳ | 5854 | 4771 | 81.50 | 6 | 6.89 |
| 3 | ವರದಕ್ಷಿಣ ಸಾವು | 115 | 105 | 91.30 | 0 | 0 |
| 4 | ಗಂಡನಿಂದ ಕಿರುಕುಳ | 2938 | 2506 | 85.30 | 3 | 3.29 |
| 5 | ಡಿ.ಪಿ.ಕಾಯ್ದೆ | 1918 | 1525 | 79.51 | 0 | 0 |

| ಕ್ರ.ಸಂ | ಶೀರ್ಷಿಕೆ | 2026 (ಜುಲೈ) | | | | |
|---|---|---|---|---|---|---|
| | | ದಾಖಲಾದ ಪ್ರಕರಣ | ದೋಷಾರೋಪಣೆ ಸಲ್ಲಿಕೆ | ದೋಷಾರೋಪಣೆ ಸಲ್ಲಿಕೆಯ ಪ್ರಮಾಣ | ಶಿಕ್ಷೆ | ಶಿಕ್ಷೆಯ ಪ್ರಮಾಣ |
| 1 | ಅತ್ಯಾಚಾರ | 348 | 121 | 34.77 | 0 | 0 |
| 2 | ಲೈಂಗಿಕ ಕಿರುಕುಳ | 3778 | 1364 | 36.10 | 0 | 0 |
| 3 | ವರದಕ್ಷಿಣ ಸಾವು | 83 | 39 | 46.99 | 0 | 0 |
| 4 | ಗಂಡನಿಂದ ಕಿರುಕುಳ | 1878 | 665 | 35.41 | 0 | 0 |
| 5 | ಡಿ.ಪಿ.ಕಾಯ್ದೆ | 1176 | 468 | 39.80 | 0 | 0 |